ಸಂಖ್ಯೆ: ಕಅಪ್ರಾ/ಕಾ-2/ಕ.ಮಾ.ಪ್ರ.ಮ/04/2020-21 ದಿನಾಂಕ 16/08/2020

ಇವರಿಗೆ,

**ಮುಖ್ಯೋಪಾಧ್ಯಯರು**

----------ಜಿಲ್ಲೆ, ಆಂಧ್ರಪ್ರದೇಶ ರಾಜ್ಯ.

**ಮಾನ್ಯರೇ,**

ವಿಷಯ:- 2020-21ನೇ ಸಾಲಿನಲ್ಲಿ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮ ಪ್ರಶಸ್ತಿ ನೀಡುವ ಕುರಿತು.

* * * * * *

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕಳೆದ 9 ವರ್ಷಗಳಿಂದ ಆಂಧ್ರಪ್ರದೇಶ ರಾಜ್ಯದಲ್ಲಿ ಎಸ್.ಎಸ್.ಸಿ. ತರಗತಿಯನ್ನು ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿ ಶಾಲೆಗೆ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಗುರುತಿಸಿ ಪುರಸ್ಕಾರ ನೀಡಿ ಪ್ರೋತ್ಸಾಹಿಸುತ್ತಿರುವುದು ತಮಗೆ ತಿಳಿದ ವಿಷಯ. 2019-20ನೇ ಕನ್ನಡ ಮಾಧ್ಯಮ ಪ್ರಶಸ್ತಿ ವಿತರಿಸಲು ಅರ್ಹ ವಿದ್ಯಾರ್ಥಿಗಳ ಮಾಹಿತಿ ಒದಗಿಸಿ ಸಹಕಾರ ನೀಡಿದ್ದಕ್ಕೆ ಧನ್ಯವಾದಗಳು.

ಪ್ರಸಕ್ತ 2020-21ನೇ ಸಾಲಿನ ಆಂಧ್ರಪ್ರದೇಶ ರಾಜ್ಯದ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮ ಪ್ರಶಸ್ತಿ ಕಾರ್ಯಕ್ರಮವನ್ನು ಆಯೋಜಿಸಲು ಉದ್ದೇಶಿಸಲಾಗಿದೆ. ಈ ಸಂಬಂಧ ಎಸ್.ಎಸ್.ಸಿ. ತರಗತಿಯನ್ನು ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿ 2020 ಮಾರ್ಚ್ ತಿಂಗಳಲ್ಲಿ ಪರೀಕ್ಷೆ ಬರೆದು ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿ ಶಾಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಮೊದಲ ಮೂರು ವಿದ್ಯಾರ್ಥಿಗಳ ಪಟ್ಟಿಯನ್ನು ಲಗತ್ತಿಸಿರುವ ನಮೂನೆಯಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಿದ್ಧಪಡಿಸಿ ಸಾಫ್ಟ್ ಮತ್ತು ಹಾರ್ಡ್ ಪ್ರತಿಗಳನ್ನು ನೀಡಲು ಕೋರಿದೆ.

1. ಕಳೆದ ಸಾಲಿನಂತೆ 10ನೇ ತರಗತಿಯನ್ನು (ಎಸ್.ಎಸ್.ಸಿ) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ಅತಿ ಹೆಚ್ಚು ಅಂಕಗಳಿಸಿ ಶಾಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳ ವಿವರಗಳನ್ನು ಮಾತ್ರ ನೀಡಲು ಕೋರಿದೆ.
2. ಕೋವಿಡ್-19 ರ ಕಾರಣ ಯಾವುದೇ ವಿದ್ಯಾರ್ಥಿಗಳಿಗೆ ಎಸ್.ಎಸ್.ಸಿ. ಬೋರ್ಡ್ ಯಾವುದೇ ಗ್ರೇಡ್ ನೀಡದೆ ಉತ್ತೀರ್ಣಗೊಳಿಸಿರುವುದರಿಂದ ***ಶಾಲಾ ಹಂತದಲ್ಲಿ ಅರ್ದವಾರ್ಷಿಕ ಪರೀಕ್ಷೆ, ಪೂರ್ವಸಿದ್ಧತಾ ಪರೀಕ್ಷೆ ಹಾಗು ಕಿರುಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪಡೆದಿರುವ ಒಟ್ಟು ಅಂಕಗಳ ಆಧಾರದಮೇಲೆ ಅತಿ ಹೆಚ್ಚು ಅಂಕಗಳಿಸಿ ಶಾಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ*** ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳ ವಿವರಗಳನ್ನು ಮಾತ್ರ ನೀಡಲು ಕೋರಿದೆ.
3. ಈ ಮೂರು ಸ್ಥಾನಗಳಲ್ಲಿ ಒಂದು ವೇಳೆ ಒಂದೇ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಅವರನ್ನೂ ಪರಿಗಣಿಸಿ ಪಟ್ಟಿಯಲ್ಲಿ ಸೇರಿಸಬೇಕು.
4. ವಿದ್ಯಾರ್ಥಿಗಳ ವಿವರವನ್ನು ನೀಡುವಾಗ ಎಸ್.ಎಸ್.ಸಿ. ಬೋರ್ಡ್‌ನಿಂದ ಪಡೆದ ಪಟ್ಟಿಯನ್ನು ಹಾಗೂ ವಿದ್ಯಾರ್ಥಿಯ ಅಂಕಪಟ್ಟಿಯೊಂದಿಗೆ, ಶಾಲಾ ಹಂತದಲ್ಲಿ ಅರ್ದವಾರ್ಷಿಕ ಪರೀಕ್ಷೆ, ಪೂರ್ವಸಿದ್ಧತಾ ಪರೀಕ್ಷೆ ಹಾಗೂ ಕಿರುಪರೀಕ್ಷೆಗಳಲ್ಲಿ ಯಾರು ಅತಿ ಹೆಚ್ಚು ಅಂಕಗಳಿಸಿ ಶಾಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳ ವಿರಗಳನ್ನು ಶಾಲಾ ಮುಖ್ಯಸ್ಥರ ದೃಢೀಕರಣದೊಂದಿಗೆ (ಹೆಸರು, ಶಾಲೆಯ ಹೆಸರು, ಮನೆಯ ವಿಳಾಸ, ಪೋಷಕರ/ವಿದ್ಯಾರ್ಥಿಯ ದೂರವಾಣಿ/ಮೊಬೈಲ್ ಸಂಖ್ಯೆ ಈ ಮಾಹಿತಿಗಳು ಪ್ರಾಧಿಕಾರಕ್ಕೆ ಅತ್ಯಂತ ಅವಶ್ಯವಾಗಿದೆ) ಕಳುಹಿಸುವುದು. ಕಡ್ಡಾಯವಾಗಿ ವಿದ್ಯಾರ್ಥಿಗಳ ಹೆಸರು ಅಂಕಪಟ್ಟಿಯಲ್ಲಿ ಇದ್ದಂತೆಯೇ ಇರುವುದು.
5. ಮೇಲಿನ ಮಾಹಿತಿಯ ಸಾಫ್ಟ್ ಪ್ರತಿಯನ್ನು (secretary.kanpra@gmail.com) ಗೆ ಸಲ್ಲಿಸುವುದು ಜೊತೆಗೆ ಹಾರ್ಡ್ ಪ್ರತಿಯನ್ನು ಅಂಚೆ ಮೂಲಕ ಕಳುಹಿಸಿಕೊಡುವುದು.
6. ದಿನಾಂಕ 10.09.2020 ರ ಒಳಗಾಗಿ ಅವಶ್ಯಕ ಮಾಹಿತಿಯನ್ನು ಕಡ್ಡಾಯವಾಗಿ ಕಳುಹಿಸುವುದು. ಒಂದು ವೇಳೆ ಕಳುಹಿಸದಿದ್ದಲ್ಲಿ ವಿದ್ಯಾರ್ಥಿಯ ಹೆಸರನ್ನು ಕೈಬಿಟ್ಟು ಉಳಿದವರನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದು.
7. ಕೋವಿಡ್-19 ರ ಹಿನ್ನಲೆಯಲ್ಲಿ 2020-21ನೇ ಸಾಲಿಗೆ ಸೀಮಿತ ಆಯವ್ಯಯ ಒದಗಿಸಲಾಗಿದ್ದು, ಸರ್ಕಾರಕ್ಕೆ ಹೆಚ್ಚುವರಿ ಅನುದಾನ ಕೋರಿದ್ದು, ಅನುದಾನ ಬಿಡುಗಡೆಯಾದ ನಂತರ ಕ್ರಮವಹಿಸಲಾಗುವುದು.

ಕಾರ್ಯದರ್ಶಿ

ಕನ್ನಡ ಅಭಿವೃದ್ಧಿ ಪ್ರಾಧಿಕಾರ

2020–21ನೇ ಸಾಲಿನ (2019–20ನೇ ಸಾಲಿನ ಶೈಕ್ಷಣಿಕ ವರ್ಷ) ಆಂಧ್ರಪ್ರದೇಶ ರಾಜ್ಯದ ಕನ್ನಡ ಮಾಧ್ಯಮ ಪ್ರಶಸ್ತಿಗೆ ಸಂಬಂಧಿಸಿದ ಶಾಲೆಗಳ ವಿವರ

| ಆಂಧ್ರಪ್ರದೇಶ ರಾಜ್ಯ (ಎಸ್.ಎಸ್.ಸಿ) | |
|---|---|
| 1 | ಜಿಲ್ಲಾ ಪರಿಷತ್ ಪ್ರೌಢಶಾಲೆ, ಹೊಳಗುಂದ, ಆಲೂರು ತಾಲೂಕು, ಕರ್ನೂಲ್ ಜಿಲ್ಲೆ. |
| 2 | ಜಿಲ್ಲಾ ಪರಿಷತ್ ಪ್ರೌಢಶಾಲೆ, ಯಳ್ಳಾರ್ತಿ, ಆಲೂರು ತಾಲೂಕು, ಕರ್ನೂಲ್ ಜಿಲ್ಲೆ. |
| 3 | ಜಿಲ್ಲಾ ಪರಿಷತ್ ಕನ್ನಡ ಪ್ರೌಢಶಾಲೆ, ವಿರುಪಾಪುರಮ್, ಆಲೂರು ತಾಲೂಕು, ಕರ್ನೂಲ್ ಜಿಲ್ಲೆ. |
| 4 | ಜಿಲ್ಲಾ ಪರಿಷತ್ ಉನ್ನತ ಪ್ರೌಢಶಾಲೆ, ಗೂಳ್ಯಂ, ಆಲೂರು ತಾಲೂಕೂ, ಕರ್ನೂಲ್ ಜಿಲ್ಲೆ. |
| 5 | ಜಿಲ್ಲಾ ಪರಿಷತ್ ಕನ್ನಡ ಮಾಧ್ಯಮ ಪ್ರೌಢಶಾಲೆ, ಡಿ.ಹಿರೇಹಾಳ್,<br>ರಾಯದುರ್ಗ ತಾಲೂಕು, ಅನಂತಪುರ ಜಿಲ್ಲೆ. |
| 6 | ಜಿಲ್ಲಾ ಪರಿಷತ್ ಪ್ರೌಢಶಾಲೆ, ಹೆಚ್. ಸಿದ್ಧಾಪುರ, ರಾಯದುರ್ಗ ತಾಲೂಕು, ಅನಂತಪುರ ಜಿಲ್ಲೆ. |
| 7 | ಜಿಲ್ಲಾ ಪರಿಷತ್ ಕನ್ನಡ ಮಾಧ್ಯಮ ಪ್ರೌಢಶಾಲೆ, ಬದಿನೇಹಾಳ್, ಆದೋನಿ ತಾಲ್ಲೂಕು,<br>ಕರ್ನೂಲ್ ಜಿಲ್ಲೆ. |
| 8 | ಜಿಲ್ಲಾ ಪರಿಷತ್ ಕನ್ನಡ ಮಾಧ್ಯಮ ಪ್ರೌಢಶಾಲೆ, ಕೌತಾಳಂ, ಆದೋನಿ ತಾಲೂಕು, ಕರ್ನೂಲ್ ಜಿಲ್ಲೆ. |
| 9 | ಜಿಲ್ಲಾ ಪರಿಷತ್ ಕನ್ನಡ ಪ್ರೌಢಶಾಲೆ, ಬಾಪುರಮ್, ಮಂತ್ರಾಲಯಂ ತಾಲೂಕು, ಕರ್ನೂಲ್ ಜಿಲ್ಲೆ. |
| 10 | ಜಿಲ್ಲಾ ಪರಿಷತ್ ಕನ್ನಡ ಪ್ರೌಢಶಾಲೆ, ನದಿಚ್ಯಾಗಿ, ಆದೋನಿ ತಾಲೂಕು, ಕರ್ನೂಲ್ ಜಿಲ್ಲೆ. |
| 11 | ಜಿಲ್ಲಾ ಪರಿಷತ್ ಪ್ರೌಢಶಾಲೆ, ದೊಡ್ಡ ಹರಿವಾಣಂ, ಆದೋನಿ ತಾಲೂಕು, ಕರ್ನೂಲ್ ಜಿಲ್ಲೆ. |
| 12 | ಎಲೆ ಮಲ್ಲೇಶಪ್ಪ ಕನ್ನಡ ಪ್ರೌಢಶಾಲೆ, ಆದೋನಿ ತಾಲೂಕು, ಕರ್ನೂಲ್ ಜಿಲ್ಲೆ. |
| 13 | ಜಿಲ್ಲಾ ಪರಿಷತ್ ಕನ್ನಡ ಮಾಧ್ಯಮ ಫ್ರೌಢಶಾಲೆ, ಉಪ್ಪರಹಾಳ್ ಕೌತಾಳಂ ತಾಲ್ಲೂಕು ಕರ್ನೂಲ್ ಜಿಲ್ಲೆ |
| 14 | ಜಿಲ್ಲಾ ಪರಿಷತ್ ಕನ್ನಡ ಫ್ರೌಢಶಾಲೆ, ರೌಡುರು ಗ್ರಾಮ, ಕೌತಾಳಂ ಮಂ.<br>ಮಂತ್ರಾಲಯ ತಾಲ್ಲೂಕು ಕರ್ನೂಲ್ ಜಿಲ್ಲೆ |

## ಕನ್ನಡ ಅಭಿವೃದ್ಧಿ ಪ್ರಾಧಿಕಾರದ 2020–2021ನೇ ಸಾಲಿನ ಆಂದ್ರಪ್ರದೇಶ ರಾಜ್ಯ ಕನ್ನಡ ಮಾಧ್ಯಮ ಪ್ರಶಸ್ತಿಗೆ ಅರ್ಹ ವಿದ್ಯಾರ್ಥಿಗಳ ಆಯ್ಕೆ ಪಟ್ಟಿ ನಮೂನೆ

### 2019–20ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕನ್ನಡ ಮಾಧ್ಯಮದಲ್ಲಿ ಹೆಚ್.ಎಸ್.ಸಿ. ತರಗತಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಶಾಲಾ ವಿದ್ಯಾರ್ಥಿಗಳ ವಿವರ

(ಪ್ರಥಮ, ದ್ವಿತೀಯ ಮತ್ತು ತೃತೀಯ)

ಕಾಲೇಜು ಕ್ರಮ ಸಂಖ್ಯೆ :

ಕ ಅ ಪ್ರಾ ನೀಡಿರುವ ಶಾಲಾ ಸಂಖ್ಯೆ:

ಕಾಲೇಜು ಹೆಸರು :

| ಕ್ರ ಸಂ. | ವಿದ್ಯಾರ್ಥಿಯ ಹೆಸರು (ಕನ್ನಡದಲ್ಲಿ) | ವಿದ್ಯಾರ್ಥಿಯ ಹೆಸರು (ಆಂಗ್ಲದಲ್ಲಿ) | ಲಿಂಗ | ನೋಂದಣಿ ಸಂಖ್ಯೆ | ಪಡೆದ ಅಂಕಗಳು | ಶೇಕಡವಾರು | ಆಯ್ಕೆಗೊಂಡ ಸ್ಥಾನ | ಪ್ರವರ್ಗ | ಶಾಲೆಯ ಹೆಸರು ಮತ್ತು ವಿಳಾಸ | ಶಾಲಾ ಮುಖ್ಯಸ್ಥರ ದೂರವಾಣಿ ಸಂಖ್ಯೆ | ಶಾಲಾ / ಶಾಲಾ ಮುಖ್ಯಸ್ಥರ ಇ-ಮೇಲ್ ವಿಳಾಸ | ವಿದ್ಯಾರ್ಥಿಯ ವಿಳಾಸ | ವಿದ್ಯಾರ್ಥಿಯ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐಎಫ್ಎಸ್‌ಸಿ ಸಂಖ್ಯೆ | ಬ್ಯಾಂಕ್ ಹೆಸರು ಮತ್ತು ಶಾಖೆಯ ವಿಳಾಸ | ವಿದ್ಯಾರ್ಥಿಯ ದೂರವಾಣಿ ಸಂಖ್ಯೆ | ಷರಾ |
|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 |
| | | | ಜಿಲ್ಲೆ: | | | | | | | | | | | | | |
| | | | 1. ತಾಲ್ಲೂಕು: | | | | | | | | | | | | | |
| 1 | | | | | | | | | | | | | | | | |
| 2 | | | | | | | | | | | | | | | | |
| 3 | | | | | | | | | | | | | | | | |

ಷರಾ : – ನಮೂನೆಯ ಪ್ರತಿ ಕಲಂಗಳ ಮಾಹಿತಿ ಹಾಗೂ ವಿದ್ಯಾರ್ಥಿಗಳ ಪೂರ್ಣ ವಿಳಾಸ ಮತ್ತು ದೂರವಾಣಿ ಸಂಖ್ಯೆ (ನಿವಾಸ ಮತ್ತು ಶಾಲೆ/ಕಾಲೇಜು) ಅಂಚೆ ಪಿನ್ ಕೋಡ್ ಸಂಖ್ಯೆಯನ್ನು ಸಹಿತ **ಕಡ್ಡಾಯವಾಗಿ ರಾಜ್ಯಭಾಷೆಯಾದ ಕನ್ನಡದಲ್ಲಿ ಹಾರ್ಡ್ ಮತ್ತು ಸಾಫ್ಟ್ ಪ್ರತಿಯನ್ನು ಎಂ.ಎಸ್. ಎಕ್ಸೆಲ್‌ನಲ್ಲಿ ನಿಗದಿತ ನಮೂನೆಯಲ್ಲಿಯೇ ನೀಡುವುದು.**

ಅಧಿಕೃತ ಸಹಿ ಮತ್ತು ಮೊಹರು